ಈ) ಈ ಅಣೆಕಟ್ಟು ಕಟ್ಟಲು ಬೇಕಾಗಿರುವ ಹಣವೆಷ್ಟು ಹಾಗೂ ಇದನ್ನು ಪೂರ್ಣ ಗೊಳಿಸಲು ಬೇಕಾದ ಅವಧಿಯೆಷ್ಟು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಈ ಯೋಜನೆಗೆ ಕೇಂದ್ರ ಪರಿಹಾರ ಮತ್ತು ಅರಣ್ಯ ಖಾತೆಯ ಸಚಿವಾಲಯದಿಂದ ಅನಮೋದನೆ ಎದುರು ನೋಡಲಾಗುತ್ತಿದೆ.

ಆ) ಈ ಯೋಜನೆಯಿಂದ ಮಂಗಳೂರು, ಮಂಗಳೂರು ರಿಫೈನರಿ ಪೆಟ್ರೋ ಕೆಮಿಕಲ್ ಮತ್ತು ಸುತ್ತಮುತ್ತಲ ಕೆಲವು ಕೈಗಾರಿಕೋದ್ಯಮಗಳಿಗೆ ನೀರು ಒದಗಿಸುವುದು ಅಲ್ಲದೆ ಪ್ರತಿ ವರ್ಷ 175 ಎಂಯು ಪ್ರಮಾಣದ ವಿದ್ಯುಚ್ಛಕ್ತಿ ದೊರಕುವ ಯೋಜನೆ ಇದೆ.

ಇ) ಒಂದು ದೇವಸ್ಥಾನ ಮತ್ತು ಒಂದು ಮಸೀದಿ ಈ ಯೋಜನೆಯಿಂದಾಗಿ ಮುಳುಗಡೆಯಾಗುವ ಸಂಭವ ಇದೆ.

ಈ) ಈ ಯೋಜನೆಯ ಅಂದಾಜು ವೆಚ್ಚ 166.32 ಕೋಟಿ ರೂಪಾಯಿಗಳು ಮತ್ತು ಈ ಕಾಮಗಾರಿಯನ್ನು 5 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮ ಇದೆ.

1 ಕಿ.ಮಿ. ರಸ್ತೆಯನ್ನು ಪೂರ್ಣಗೊಳಿಸಲು ಅಂದಾಜು ವೆಚ್ಚ

2478- ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಒಂದು ಕಿ.ಮಿ. ರಸ್ತೆಯನ್ನು ಪೂರ್ಣ ಗೊಳಿಸುವುದಕ್ಕೆ ಆಗುವ ಅಂದಾಜು ಎಷ್ಟು?

ಆ) ಅಂದಾಜು ವೆಚ್ಚವು ಜಿಲ್ಲೆಯಿಂದ ಜಿಲ್ಲೆಗೆ ಹಾಗೂ ಸ್ಥಳದಿಂದ ಸ್ಥಳಕ್ಕೆ ಭೂ ಪರಿಸ್ಥಿತಿಯನ್ನು ಆವಲಂಬಿಸಿ ಬೇರೆ ಇರುತ್ತದೆಯೇ?

ಇ) ರಸ್ತೆಗಳನ್ನು ನಿರ್ವಹಣೆ ಮಾಡಲು ಖಾಸಗಿ ವ್ಯಕ್ತಿಗಳಿಗೆ ವಹಿಸಿ ಕೊಡುವ ಪ್ರಸ್ತಾವನೆ ಏನಾದರೂ ಸರ್ಕಾರದ ಬಳಿ ಇದೆಯೇ?

ಈ) ಹಾಗಿದ್ದಲ್ಲಿ ಅಂತಹವುದಕ್ಕೆ ನಿಗಧಿಪಡಿಸಿರುವ ನಿಯಮ ಮತ್ತು ನಿಭಂದನೆಗಳೇನು?

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ರಸ್ತೆಯ ದರ್ಜೆ ಎಷ್ಟು ಪಥದ ರಸ್ತೆ ಇತ್ಯಾದಿ ಇವುಗಳನ್ನು ಆಧರಿಸಿ ಒಂದು ಕಿ.ಮಿ. ರಸ್ತೆ ಮಾಡುವುದಕ್ಕೆ 1.ಕಿ.ಮೀಗೆ 2.50 ಲಕ್ಷ ರೂಗಳಿಂದ 6.50 ಲಕ್ಷ ರೂ.ಗಳಾಗುತ್ತದೆ.

ಆ) ಹೌದು

ಇ) ಇಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ

ಇರಗಂಪಲ್ಲಿ ಮಂಡಲ ಪಂಚಾಯಿತಿ ಎಗವ ಮಿಂಡಗಲ್ ಗ್ರಾಮದ ಗ್ರಾಮಠಾಣವನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದು.

2691 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಇರಗಂಪಲ್ಲಿ ಮಂಡಲ ಪಂಚಾಯತಿ ಎಗವ ಮಿಂಡಿಗಲ್ ಗ್ರಾಮದ ಗ್ರಾಮಠಾಣವು ಒಬ್ಬ ರೈತನಿಂದ ಅನಧಿಕೃತವಾಗಿ ಸಾಗುವಳಿ ಮಾಡಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಅನಧಿಕೃತವಾಗಿ ಸ್ವಾಧೀನದಲ್ಲಿರುವ ವಿಸ್ತೀರ್ಣವೆಷ್ಟು ಮತ್ತು ಅತನನ್ನು ಹೊರಹಾಕಲು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಮತ್ತು ಮಂಡಲ ಪಂಚಾಯಿತಿಯವರು ತೆಗೆದುಕೊಂಡಿರುವ ಕ್ರಮವೇನು?

ಇ) ನಿವೇಶನ ರಹಿತರು ಯಾರಾದರೂ ಇದ್ದಾರೆಯೇ? ನಿವೇಶನ ರಹಿತ ಬಡಜನರಿಗೆ ನಿವೇಶನದ ಸ್ವಾಧೀನ ಪತ್ರಗಳನ್ನು ನೀಡಲು ಮತ್ತು ಅತನನ್ನು ಗ್ರಾಮಠಾಣದಿಂದ ಹೊರಹಾಕಲು ಏನಾದರೂ ತೊಂದರೆ ಇದೆಯೇ?

ಶ್ರೀ ಕೆ.ಹೆಚ್.ಪಾಟೀಲ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಹೌದು

ಆ) ಅನಧಿಕೃತವಾಗಿ ಸ್ವಾಧೀನದಲ್ಲಿರುವ ಭೂಮಿಯ ವಿಸ್ತೀರ್ಣವು 1-00 ಎಕರೆ ಇರುತ್ತದೆ.

ಅನಧಿಕೃತವಾಗಿ ಸ್ವಾಧೀನಪಡಿಸಿಕೊಂಡಿರುವನ ಬಗ್ಗೆ ಮುನಿಸಿಪಲ್ ಕೋರ್ಟಿನಲ್ಲಿ ಮಂಡಲ ಪಂಚಾಯತಿಯು ಮೊಕದ್ದಮೆಯನ್ನು ಹೂಡಿತ್ತು ಅದರಲ್ಲಿ ತೀರ್ಮಾನವು ಮಂಡಲ ಪಂಚಾಯಿತಿಯ ಪರವಾಗಿದ್ದು ಇದರ ವಿರುದ್ಧ ಅನಧಿಕೃತ ಸ್ವಾಧೀನಗಾರನು ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು ಅದು ಇನ್ನು ಬಾಕಿ ಉಳಿದಿರುತ್ತದೆ.

ಆ) ಹೌದು 35 ಜನ ನಿವೇಶನ ರಹಿತರಿರುತ್ತಾರೆ. ಪ್ರಕರಣವು ಉಚ್ಚ ನ್ಯಾಯಾಲಯದ ಮುಂದೆ ಬಾಕಿ ಇರುವುದರಿಂದ ಸ್ವಾಧೀನ ಕ್ರಮವನ್ನು ಜಾರಿ ಮಾಡಲು ಆಗುವುದಿಲ್ಲ ಮತ್ತು ಈ ಜಮೀನಿಗೆ ಸಂಬಂಧಪಟ್ಟಂತೆ ಸ್ವಾಧೀನ ಪತ್ರವನ್ನು ಹಂಚಲು ಆಗುವುದಿಲ್ಲ

ಇ) ಆದಾಗ್ಯೂ ಗ್ರಾಮಠಾಣದಲ್ಲಿ ಬಾಕಿ ಉಳಿದಿರುವ 4-00 ಎಕರೆ ಜಮೀನು ಅನಧಿಕೃತ ಸ್ವಾದೀನದಿಂದ ಮುಕ್ತವಾಗಿರುತ್ತದೆ. ಅದರಲ್ಲಿ ನಿವೇಶನಗಳನ್ನು ಮಾಡಿ ಬಡ ನಿವೇಶನರಹಿತ ಜನರಿಗೆ ಹಂಚಲು ಕ್ರಮ ಕೈಗೊಳ್ಳಲಾಗುತ್ತದೆ.

ಕನಿಶೆಟ್ಟಿಹಳ್ಳಿ ಗ್ರಾಮದಲ್ಲಿ ನಿವೇಶನ ವಿಂಗಡನೆ

8289 - ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಗ್ರಾಮಿಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಯಿಂದ ಕನಿಶೆಟ್ಟಿಹಳ್ಳಿ ಗ್ರಾಮದಲ್ಲಿ ನಿವೇಶನ ವಿಂಗಡನೆಗಳನ್ನು ಮಾಡಿರುವುದು ಹಾಗೂ ಹಕ್ಕು ಪತ್ರಗಳನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹಕ್ಕು ಪತ್ರಗಳನ್ನು ಹಂಚಲಾಗಿದೆಯೇ (ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸಿ)

ಇ) ನಿವೇಶನ ವಿಂಗಡಣೆ ಮಾಡಿರುವ ಜಾಗವನ್ನು ಯಾರಾದರೂ ಪ್ರಭಾವಶಾಲಿ ವ್ಯಕ್ತಿಗಳು ಅನಧಿಕೃತ ಸಾಗುವಳಿ ಮಾಡುತ್ತಿರುವ ಬಗ್ಗೆ ಸರ್ಕಾರಕ್ಕೆ ದೂರು ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರದಿಂದ ಕೈಗೊಳ್ಳಬೇಕಾದ ಕ್ರಮವೇನು?